ರಾಜ್ಯದಲ್ಲಿ ಮತೀಯ ಗಲಭೆ ನಿಯಂತ್ರಿಸಲು ವಿಶೇಷ ಪೋಲೀಸ್ ದಳ.

516 (767): ಶ್ರೀ ಎ. ಎಂ. ಹಿಂಡುಸಗೇರಿ (ಹುಬ್ಬಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಮತೀಯ ಗಲಭೆಯನ್ನು ನಿಯಂತ್ರಿಸಲು ಸರ್ಕಾರವು ವಿಶೇಷ ಪೋಲೀಸ್ ದಳವನ್ನು ರಚಿಸಲು ನಿರ್ಧರಿಸಿದೆಯೇ ?

ಆ. ಹಾಗಿದ್ದಲ್ಲಿ, ಅಂತಹ ಪೋಲೀಸ್ ದಳವನ್ನು ರಚಿಸಲು ನಿರ್ಣಾಯಕವಾಗುವ ಅಂಶಗಳಾವುವು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ. ಹೌದು.

ಆ. ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿದೆ.

ಮಂತ್ರಿಗಳು, ಶಾಸಕರುಗಳಿಂದ ಲೋಕಾಯುಕ್ತಕ್ಕೆ ಚರ ಮತ್ತು ಸ್ಥಿರ ಆಸ್ತಿಗಳ ವಿವರ.

517 (691): ಶ್ರೀ ಸೋಮಪ್ಪ ಸುವರ್ಣ (ಮೂಲ್ಕಿ, ಮೂಡಬಿದರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಲೋಕಾಯುಕ್ತಕ್ಕೆ ಎಷ್ಟು ಜನ ಮಂತ್ರಿಗಳು, ಶಾಸಕರುಗಳು ಚರ ಮತ್ತು ಸ್ಥಿರ ಆಸ್ತಿಗಳ ವಿವರಗಳನ್ನು ಸಲ್ಲಿಸಿರುತ್ತಾರೆ ?

2. ಚರ ಮತ್ತು ಸ್ಥಿರ ಆಸ್ತಿಗಳ ವಿವರಗಳನ್ನು ಕೊಡದಿದ್ದವರು ಸಚಿವರಾಗಿದ್ದಾರೆಯೇ ?

3. ಇನ್ನು ಎಷ್ಟು ಜನ ಕೊಡದೆ ಇದ್ದಾರೆ ?

4. ವಿವರ ಕೊಡದಿದ್ದವರಿಗೆ ವಿವರ ಕೊಡಲು ಸರಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

1. 15 ಜನ ಸಚಿವರುಗಳು, 32 ಜನ ವಿಧಾನ ಸಭಾ ಸದಸ್ಯರುಗಳು, 11 ಜನ ವಿಧಾನ ಪರಿಷತ್ತಿನ ಸದಸ್ಯರುಗಳು.

2. ಹೌದು.

3. 24 ಜನ ಸಚಿವರುಗಳು, 159 ಜನ ವಿಧಾನ ಸಭಾ ಸದಸ್ಯರುಗಳು ಹಾಗೂ 60 ಜನ ವಿಧಾನ ಪರಿಷತ್ತಿನ ಸದಸ್ಯರುಗಳು ಆಸ್ತಿ ವಿವರಗಳನ್ನು ನೀಡಬೇಕಾಗಿದೆ.

4. ನಿಗದಿತ ಅವಧಿಯೊಳಗೆ ಆಸ್ತಿ ಋಣ ಪಟ್ಟಿಯನ್ನು ನೀಡದ ಸಚಿವರ; ಶಾಸಕರ ಬಗ್ಗೆ ಲೋಕಾಯುಕ್ತವು ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ನೀಡಿ, ಆ ವರದಿಯನ್ನು ಸಂಬಂಧಪಟ್ಟ ಸಚಿವರಿಗೆ: ಶಾಸಕರಿಗೆ ಕಳುಹಿಸಲಾಗುವುದು. ಈ ವರದಿಯ ನಂತರ ಎರಡು ತಿಂಗಳೊಳಗಾಗಿ, ಸಚಿವರು: ಶಾಸಕರು ತಮ್ಮ ಆಸ್ತಿ ಋಣ ಪಟ್ಟಿಯನ್ನು ಸಲ್ಲಿಸದಿದ್ದಲ್ಲಿ, ಅಂತಹ ಸಚಿವರು; ಶಾಸಕರುಗಳ